

ಕಲ್ಲವ್ವನ ಅವ್ವ, ಆ ಜಡ್ಡಿನಿಂದ ಸುಧಾರಿಸಿಕೊಳ್ಳುವ ಬದಲು ಸತ್ತೇ ಹೋದಳು! ಆಗ, ನಿನ್ನೆ ಮೊನ್ನೆಯವರೆಗೆ ಅತ್ಯಂತ ಲವಲವಿಕೆಯಿಂದ ಓಡಾಡಿಕೊಂಡಿದ್ದ ತನ್ನವ್ವ ಇದ್ದಕ್ಕಿದ್ದಂಗೆ ಹೀಗೆ ಉಸುರು ಚೆಲ್ಲಿ ಗುರುವಿನ ಪಾದ ಸೇರಿಕೊಳ್ಳಲು ಕಲ್ಲವ್ವನ ರೆಕ್ಕೆಗಳೇ ಕತ್ತರಿಸಿ ಹೋದಂತಾಗಿ ಆಘಾತಕ್ಕೊಳಗಾದಳು. ಇದರಿಂದ ಅಕ್ಷರಶಃ ಕಂಗಾಲಾಗಿ ಹೋದ ಆಕೆಯನ್ನು ಇನ್ನಿಲ್ಲದ ಅನಾಥಪ್ರಜ್ಞೆ ಕಾಡತೊಡಗಿತು. ಆಗಲೇ ಈ ಅನಾಥಪ್ರಜ್ಞೆಯನ್ನು ಅನುಭವಿಸಲಾಗದ ಕಲ್ಲವ್ವ ಅದೊಂದು ದಿನ ಸತ್ತೇ ಹೋಗಬೇಕೆಂದು ನಿರ್ಧರಿಸಿದಳು. ಆದರೂ ಸಾಯುವ ಧೈರ್ಯ ಸಾಲದೇ ಆ ನಿರ್ಧಾರದಿಂದ ಹಿಂದೆ ಸರಿದಳು. ಕಡೆಗೂ ಗಂಡನ ಮನೆಯಲ್ಲಿದ್ದ ತನ್ನ ಪಾಲಿನ ಒಡಕಿ ಮ್ಯಾಲಿನ ಎರಡೆಕರೆ ಜಮೀನಿಗೋಸ್ಕರವಾಗಿಯಾದರೂ ತಾನು ಜೀವದಿಂದ ಇರಲೇಬೇಕೆಂದುಕೊಂಡು ಮತ್ತೇ ಬದುಕಿನತ್ತ ಮುಖ ಮಾಡಿದಳು. ಆ ಜಮೀನಿನ ಮೇಲೆ ಜೀವವನ್ನೇ ಇಟ್ಟುಕೊಂಡಿದ್ದ ಕಲ್ಲವ್ವ ತಾನು ಸತ್ತು ಹೋಗುವುದರೊಳಗೆ ಅದಕ್ಕೊಂದು ಗತಿ ಕಾಣಿಸಬೇಕೆಂದುಕೊಂಡಿದ್ದಳು!

ಈ ವಿಚಾರವನ್ನು ಅರಿತಿದ್ದ ನಾನು ಆ ಜಮೀನಿನ ಆಶೆಗಾಗಿ ತಾಯಿ- ಮಗ ಎಂಬ ರಕ್ತಸಂಬಂಧದ ಎಳೆಯೊಂದರ ಚುಂಗನ್ನು ಹಿಡಿದುಕೊಂಡು ಅದೆಷ್ಟೋ ಸಲ ಕಲ್ಲವ್ವನ ಮನೆಗೆ ಎಡತಾಕಿದ್ದೆ. ಆಗೆಲ್ಲ, 'ಮುಪ್ಪಿನ ನಿನ್ನನ್ನು ಛಲೋತಂಗಿ ನೋಡ್ಕೊಂತೀನಿ...' ಎಂದು